ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.
ಸಂಖ್ಯೆ : ವಾಇ : ಉ ನಿ : ಸುಮಪ : 2018–19 ದಿನಾಂಕ: 12–07–2018

ವಿಧಾನ ಪರಿಷತ್ತಿನಲ್ಲಿಂದು:

ಸಂಖ್ಯೆ648/748

ಪತ್ರಿಕಾ ಪ್ರಕಟಣೆ

# ಪ್ರಾಂಶುಪಾಲರ ಹುದ್ದೆಗಳನ್ನು ನೇಮಕಾತಿ ಮಾಡಲು ಕ್ರಮ

ಬೆಂಗಳೂರು, ಜುಲೈ 12 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಒಟ್ಟು ಸಂಖ್ಯೆ 412, ಪ್ರಾಂಶುಪಾಲರ ಮಂಜೂರಾದ ಹುದ್ದೆ: 372, ಕಾರ್ಯನಿರ್ವಹಿಸುತ್ತಿರುವ ಗ್ರೇಡ್–1 ಪ್ರಾಂಶುಪಾಲಕರ ಸಂಖ್ಯೆ 6 ಹಾಗೂ ಕೊರತೆ ಇರುವ ಗ್ರೇಡ್ –1 ಪ್ರಾಂಶುಪಾಲರ ಸಂಖ್ಯೆ 366 ಎಂದು ಉನ್ನತ ಶಿಕ್ಷಣ ಸಚಿವ ಜಿ.ಟಿ. ದೇವೇಗೌಡ ಅವರು ತಿಳಿಸಿದರು.

ವಿಧಾನ ಪರಿಷತ್ತಿನಲ್ಲಿ ಇಂದು ಅವರು ಕೆ. ಪ್ರತಾಪಚಂದ್ರ ಶೆಟ್ಟಿ ಅವರ ಪ್ರಶ್ನೆಗೆ ಉತ್ತರಿಸಿ ಮಾತನಾಡಿ ಯು.ಜಿ.ಸಿ. ನಿಯಮಗಳನುಸಾರ ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳನುಸಾರ ಪ್ರಾಂಶುಪಾಲರ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಬೇಕಾಗಿರುತ್ತದೆ.

ಅದರಂತೆ ಪ್ರಾಂಶುಪಾಲರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಮಾಡಲು ಕರಡು ನಿಯಮಗಳನ್ನು ರಚಿಸಿದ್ದು, ಪರಿಶೋಧನೆಗಾಗಿ ಸಂಸದೀಯ ವ್ಯವಹಾರ ಮತ್ತು ಶಾಸನ ರಚನಾ ಇಲಾಖೆಗೆ ಕಳುಹಿಸಲಾಗಿದೆ.

ಖಾಯಂ ಪ್ರಾಂಶುಪಾಲರನ್ನು ನೇಮಕ ಮಾಡುವವರೆಗೂ ಪ್ರಸ್ತುತ ಸೇವೆಯಲ್ಲಿ ಹಿರಿಯರಾದಂತಹ ಪ್ರಾಧ್ಯಾಪಕರನ್ನು ಪ್ರಭಾರ ಪ್ರಾಂಶುಪಾಲರಾಗಿ ನೇಮಕ ಮಾಡಲಾಗುತ್ತಿದೆ.

ಖಾಲಿ ಇರುವ ಬೋಧಕೇತರ ಹುದ್ದೆಗಳನ್ನು ಭರ್ತಿಮಾಡಿಕೊಳ್ಳಲು ಅನುಮತಿ ನೀಡುವಂತೆ ಕಡತವನ್ನು ಆರ್ಥಿಕ ಇಲಾಖೆಗೆ ಕಳುಹಿಸಲಾಗಿದ್ದು, ಆರ್ಥಿಕ ಇಲಾಖೆಯು ಸಹಮತಿ ನೀಡಿದ ನಂತರ ಖಾಲಿ ಹುದ್ದೆಗಳನ್ನು ಭರ್ತಿಮಾಡಲು ಕ್ರಮಕೈಗೊಳ್ಳಲಾಗುವುದು ಎಂದರು.

ಸಂಖ್ಯೆ649/749

## ಶಿಥಿಲ ವ್ಯವಸ್ಥೆಯಲ್ಲಿರುವ ಶಾಲಾ ಕೊಠಡಿಗಳ ದುರಸ್ತಿಗೆ ಕ್ರಮ

ಬೆಂಗಳೂರು, ಜುಲೈ 12 (ಕರ್ನಾಟಕ ವಾರ್ತೆ)

ರಾಜ್ಯದ 5588 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 10258 ಕೊಠಡಿಗಳು ಹಾಗೂ 264 ಸರ್ಕಾರಿ ಪ್ರೌಢ ಶಾಲೆಗಳಲ್ಲಿ 949 ಕೊಠಡಿಗಳು ಶಿಥಿಲಗೊಂಡಿರುತ್ತವೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎನ್. ಮಹೇಶ್ ಅವರು ತಿಳಿಸಿದರು. ಎಂದರು.

ವಿಧಾನ ಪರಿಷತ್ತಿನಲ್ಲಿ ಇಂದು ಸದಸ್ಯ ಆರ್. ಧರ್ಮಸೇನ್ ಅವರ ಪ್ರಶ್ನೆಗೆ ಉತ್ತರಿಸಿ ಮಾತನಾಡಿದ ಸಚಿವರು ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ದುರಸ್ಥಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು, 2017-18 ನೇ ಸಾಲಿನಲ್ಲಿ 672 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಥಿಲಗೊಂಡ 760 ಕೊಠಡಿಗಳ ಮರು ನಿರ್ಮಾಣಕ್ಕಾಗಿ ರೂ 6604.95 ಲಕ್ಷ ಹಾಗೂ 238 ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಶಿಥಿಲಗೊಂಡ 312 ಕೊಠಡಿಗಳ ಮರು ನಿರ್ಮಾಣಕ್ಕಾಗಿ ರೂ 4132/- ಲಕ್ಷ ರೂ. ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

2017-18 ನೇ ಸಾಲಿನಲ್ಲಿ 1338 ಸರ್ಕಾರಿ ಪ್ರಾಥಮಿ ಶಾಲೆಗಳಲ್ಲಿ 1338 ಕೊಠಡಿಗಳ ದುರಸ್ಥಿಗಾಗಿ ರೂ. 2866.00 ಲಕ್ಷ ಹಾಗೂ 777 ಸರ್ಕಾರಿ ಪ್ರೌಢ ಶಾಲೆಗಳಲ್ಲಿ 777 ಕೊಠಡಿಗಳ ದುರಸ್ಥಿಗಾಗಿ ರೂ. 3500 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

2018-19 ನೇ ಸಾಲಿನ ಆಯವ್ಯಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಹಂಚಿಕೆಯಾದ ಅನುದಾನದ ಲಭ್ಯತೆ ಆಧರಿಸಿ, ಸರ್ಕಾರಿ ಶಾಲೆಗಳ ಕೊಠಡಿ ದುರಸ್ಥಿ, ಶಿಥಿಲಗೊಂಡ ಕೊಠಡಿ/ಕಟ್ಟಡಗಳ ಮರು ನಿರ್ಮಾಣಕ್ಕಾಗಿ ಆದ್ಯತೆ ಮೇರೆಗೆ ಹಂತ-ಹಂತವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ ಎಂದರು.

ಸಂಖ್ಯೆ650/750

# ರಾಜ್ಯದಲ್ಲಿ 21 ಜಲ ವಿದ್ಯುತ್ ಯೋಜನೆಗಳು ಚಾಲ್ತಿಯಲ್ಲಿವೆ

ಬೆಂಗಳೂರು, ಜುಲೈ 12 (ಕರ್ನಾಟಕ ವಾರ್ತೆ)

**ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಅಧೀನದಲ್ಲಿ ಒಟ್ಟು 3679.75 ಮೆ.ವ್ಯಾ. ಸಾಮರ್ಥ್ಯದ 21 ಜಲ ವಿದ್ಯುತ್ ಯೋಜನೆಗಳು ಚಾಲ್ತಿಯಲ್ಲಿರುತ್ತವೆ ಎಂದು ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ಹೇಳಿದರು.**

**ವಿಧಾನ ಪರಿಷತ್ತಿನಲ್ಲಿ ಇಂದು ಅವರು ಸದಸ್ಯರಾದ ಡಾ: ತೇಜಸ್ವಿನಿ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿ ಕ್ರೆಡಲ್ ಮುಖಾಂತರ ಹಂಚಿಕೆಯಾದ ಕಿರುಜಲ ವಿದ್ಯುತ್ ಯೋಜನೆಗೆ ಸಂಬಂಧಿಸಿದಂತೆ ಒಟ್ಟಾರೆ 96 ಸಂಖ್ಯೆ 834.858 ಮೆ.ವ್ಯಾ. ಸಾಮರ್ಥ್ಯದ ಸ್ವತಂತ್ರ್ಯ ವಿದ್ಯುತ್ ಉತ್ಪಾದನಾ ಘಟಕಗಳು ಚಾಲ್ತಿಯಲ್ಲಿರುತ್ತವೆ.**

**ಕಿರುಜಲ ವಿದ್ಯುತ್ ಯೋಜನೆಗಳಿಗೆ ಸಂಬಂಧಿಸಿದಂತೆ ಬಳಸಿಕೊಂಡ ಅರಣ್ಯ ಪ್ರದೇಶಗಳ ಮಾಹಿತಿಯನ್ನು ಯೋಜನಾ ಅಬಿವೃದ್ಧಿದಾರರಿಂದ ಪಡೆಯಬೇಕಾಗಿದ್ದು, ಮಾಹಿತಿಯು ಆಗಾಧವಾಗಿರುವುದರಿಂದ ಸಧ್ಯಕ್ಕೆ ಲಭ್ಯವಿರುವುದಿಲ್ಲ. ಕಿರುಜಲ ವಿದ್ಯುತ್ ಯೋಜನೆಗೆ ಅವಶ್ಯವಿರುವ ಜಮೀನನ್ನು ಖಾಸಗಿ ಅಭಿವೃದ್ಧಿದಾರರೆ ಖರೀದಿ/ಗುತ್ತಿಗೆ ಆಧಾರದ ಮೇಲೆ ಪಡೆದುಕೊಳ್ಳುತ್ತಾರೆ ಮತ್ತು ಪರಿಹಾರವನ್ನು ಸದರಿ ಅಭಿವೃದ್ಧಿದಾರರೆ ನೀಡಬೇಕಾಗಿರುತ್ತದೆ ಎಂದು ತಿಳಿಸಿದರು.**

ಸಂಖ್ಯೆ651/751

## ವಿಶ್ವವಿದ್ಯಾನಿಲಯಗಳಲ್ಲಿ ಏಕರೂಪ ಪಠ್ಯಕ್ರಮವನ್ನು ಜಾರಿಗೆ ತರುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಬೆಂಗಳೂರು, ಜುಲೈ 12 (ಕರ್ನಾಟಕ ವಾರ್ತೆ)

ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ಪ್ರಸ್ತುತ ಏಕರೂಪ ಪಠ್ಯಕ್ರಮವನ್ನು ಜಾರಿಗೆ ತರುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ ಎಂದು ಉನ್ನತ ಶಿಕ್ಷಣ ಸಚಿವ ಜಿ.ಟಿ. ದೇವೇಗೌಡ ಅವರು ತಿಳಿಸಿದರು.

ವಿಧಾನ ಪರಿಷತ್ತಿನ ಸದಸ್ಯರಾದ ಆರ್. ಪ್ರಸನ್ನಕುಮಾರ್ ಅವರು ಇಂದು ಸದನದಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಉನ್ನತ ಶಿಕ್ಷಣ ಸಚಿವ ಜಿ.ಟಿ. ದೇವೇಗೌಡ ಅವರು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಮಾರ್ಗಸೂಚಿಗಳನುಸಾರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರಲ್ಲಿ ಕಲ್ಪಿಸಿದ ಅವಕಾಶಗಳನ್ವಯ ಪ್ರತಿಯೊಂದು ವಿಷಯಕ್ಕೂ ಒಂದು ಅಧ್ಯಯನ ಮಂಡಳಿಯನ್ನು ರಚಿಸಿ ಪಠ್ಯಕ್ರಮಗಳ ನಿಯಮಾವಳಿಯನ್ನು ಸಿದ್ದಪಡಿಸಲಾಗುತ್ತದೆ. ಸದರಿ ನಿಯಮಾವಳಿಗೆ ವಿಶ್ವವಿದ್ಯಾಲಯಗಳ ವಿದ್ಯಾವಿಷಯಕ ಪರಿಷತ್ತುಗಳ ಅಂಗೀಕಾರ ಪಡೆದು ತದನಂತರ ರಾಜ್ಯಪಾಲರ ಅನುಮೋದನೆಯೊಂದಿಗೆ ಪಠ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾಗುತ್ತದೆ.

ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಮಾರ್ಗಸೂಚಿಗಳನುಸಾರ ಆಯಾ ವಿಶ್ವವಿದ್ಯಾಲಯಗಳ ವಿದ್ಯಾವಿಷಯಕ ಪರಿಷತ್ತುಗಳಲ್ಲಿ ವಿನಿಯಮ ರಚಿಸಿ, ರಾಜ್ಯಪಾಲರ ಅನುಮೋದನೆ ಪಡೆದ ಪಿಹೆಚ್‌ಡಿ ವಿನಿಯಮಗಳನಸಾರ ವಿವಿಧ ವಿಷಯಗಳಲ್ಲಿನ ಪಿಹೆಚ್‌ಡಿ ಪದವಿಗೆ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗುತ್ತದೆ.

ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಮಾನ್ಯೆ ಇರುವ ವಿಶ್ವವಿದ್ಯಾಲಯಗಳಿಂದ ಪಡೆದ ಸ್ನಾತಕೋತ್ತರ ಪದವಿಯಲ್ಲಿ ಶೇಕಡಾ 55 ಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದವರು ವಿಶ್ವವಿದ್ಯಾಲಯಗಳ ಪಿಹೆಚ್‌ಡಿ ಪದವಿಯ ಪ್ರವೇಶ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ, ವರ್ಗ–1 ರ ಹಾಗೂ ವಿಕಲಚೇತನ ಅಭ್ಯರ್ಥಿಗಳು ಶೇಕಡಾ 50 ರಷ್ಟು ಅಂಕಗಳನ್ನು ಪಡೆದಿರಬೇಕು.

ಮುಂದುವರೆದು, ಎನ್‌ಇಟಿ ಮತ್ತು ಎಸ್‌ಎಲ್‌ಇಟಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವವರು/ವಿದೇಶ ವಿದ್ಯಾರ್ಥಿಗಳಿಗೆ ಪಿಹೆಚ್‌ಡಿ ಅರ್ಹತಾ ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ.

ಪಿಹೆಚ್‌ಡಿ ಪದವಿಯ ಪ್ರವೇಶ ಪರೀಕ್ಷೆಯ ಅಂಕ ಹಾಗೂ ಸ್ನಾತಕೋತ್ತರ ಪದವಿಗಳ ಅಂಕ ಮತ್ತು ಸಂದರ್ಶನದಲ್ಲಿ ಪಡೆದಿರುವ ಅಂಕಗಳ ಆಧಾರದ ಮೇಲೆ ಅರ್ಹತೆ ಮತ್ತು ಮೀಸಲಾತಿಯನ್ನು ಆಧರಿಸಿ ಖಾಲಿ ಇರುವ ಪಿಹೆಚ್‌ಡಿ ಸೀಟುಗಳಿಗೆ ಪ್ರವೇಶ ನೀಡಲಾಗುವುದು ಎಂದರು.

ಸಂಖ್ಯೆ652/752

# “ಬೆಳ್ಳಿಹೆಜ್ಜೆ”
# ನಿರ್ದೇಶಕ ಸಾಯಿಪ್ರಕಾಶ್ ಮುಖ್ಯ ಅತಿಥಿ

ಬೆಂಗಳೂರು, ಜುಲೈ 12 (ಕರ್ನಾಟಕ ವಾರ್ತೆ)

ಕರ್ನಾಟಕ ಚಲನಚಿತ್ರ ಅಕಾಡೆಮಿಯ ಈ ತಿಂಗಳ “ಬೆಳ್ಳಿ ಹೆಜ್ಜೆ” ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಚಲನಚಿತ್ರ ನಿರ್ದೇಶಕ ಸಾಯಿಪ್ರಕಾಶ್ ಅವರು ಪಾಲ್ಗೊಳ್ಳಲಿದ್ದಾರೆ.

ಜುಲೈ 14 ರ ಶನಿವಾರದಂದು ಸಂಜೆ 5.00 ಗಂಟೆಗೆ ನಗರದ ಕುಮಾರ ಪಾರ್ಕ್ ರಸ್ತೆಯಲ್ಲಿರುವ ಗಾಂಧಿ ಭವನದಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ನಿರ್ದೇಶಕ ಸಾಯಿ ಪ್ರಕಾಶ್ ಅವರನ್ನು ಕುರಿತ ಸಾಕ್ಷ್ಯಚಿತ್ರ ಹಾಗೂ ಛಾಯಾಚಿತ್ರ ಪ್ರದರ್ಶನವನ್ನು ಸಹ ಹಮ್ಮಿಕೊಳ್ಳಲಾಗಿದೆ.

ಹಿರಿಯ ಸಾಹಿತಿ ಡಾ. ದೊಡ್ಡರಂಗೇಗೌಡ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎಸ್. ಎ. ಚಿನ್ನೇಗೌಡ, ಚಲನಚಿತ್ರ ಕಲಾವಿದರ ಸಂಘದ ಹಿರಿಯ ನಿರ್ಮಾಪಕರು ಹಾಗೂ ಕಾರ್ಯದರ್ಶಿಗಳಾದ ರಾಕ್‌ಲೈನ್ ವೆಂಕಟೇಶ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಡಾ. ನಾಗತಿಹಳ್ಳಿ ಚಂದ್ರಶೇಖರ್ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಚಲನಚಿತ್ರದ ರಂಗದ ಹಲವು ಗಣ್ಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿಯ ರಿಜಿಸ್ಟ್ರಾರ್ ಹೆಚ್.ಬಿ. ದಿನೇಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಖ್ಯೆ653/753

# ಎಸಿಬಿ ದಾಳಿ

ಬೆಂಗಳೂರು, ಜುಲೈ 12 (ಕರ್ನಾಟಕ ವಾರ್ತೆ)

**ದಾವಣಗೆರೆ ನಗರದ ನಿವಾಸಿಯಾಗಿರುವ ಫಿರ್ಯಾದಿರವರು ತಮ್ಮ ಬಾಬ್ತು ಜಮೀನಿನ ಖಾತೆ ಬದಲಾವಣೆಗಾಗಿ ಅರ್ಜಿ ಸಲ್ಲಿಸಿರುತ್ತಾರೆ. ಶ್ರೀ.ವಿಷ್ಣು, ಗ್ರಾಮ ಲೆಕ್ಕಾಧಿಕಾರಿ ಹಾಗೂ ಶ್ರೀ.ಹನುಮಂತ, ಗ್ರಾಮ**

ಸೇವಕ, ಭರಮಸಮುದ್ರ ವೃತ್ತ, ಜಗಳೂರು ತಾಲ್ಲೂಕು, ದಾವಣಗೆರೆ ರವರು ಅರ್ಜಿದಾರರ ಖಾತೆ ಬದಲಾವಣೆ ಮಾಡಿಕೊಡಲು ₹ 4,000/– ಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:11.07.2018 ರಂದು ಶ್ರೀ.ವಿಷ್ಣು, ಗ್ರಾಮ ಲೆಕ್ಕಾಧಿಕಾರಿ ಹಾಗೂ ಶ್ರೀ.ಹನುಮಂತ, ಗ್ರಾಮ ಸೇವಕ, ಭರಮಸಮುದ್ರ ವೃತ್ತ, ಜಗಳೂರು ತಾಲ್ಲೂಕು, ದಾವಣಗೆರೆ ರವರು ಅರ್ಜಿದಾರರಿಂದ ₹ 3,000/– ಲಂಚದ ಹಣ ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ದಾವಣಗೆರೆ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿ ಬಿದ್ದಿರುತ್ತಾರೆ. ಇವರಿಬ್ಬರನ್ನು ದಸ್ತಗಿರಿ ಮಾಡಿ ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ. ತನಿಖೆ ಮುಂದುವರೆದಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಸಂಖ್ಯೆ654/754

## ACB Raid

**Bengaluru, July 12 (Karnataka Information)**

A resident of Davanagere town had sought for change in khatha. Sri.Vishnu, Village Accountant and Sri.Hanumantha, Grama Sevaka, Bharamasamudra Circle, Jagalur Taluk, Davanagere had demanded a bribe of ₹ 4,000/- to do the same.

On 11.07.2018 the officials of Anti Corruption Bureau Davanagere district have trapped and arrested Sri.Vishnu, Village Accountant and Sri.Hanumantha, Grama Sevaka, Bharamasamudra Circle, Jagalur Taluk, Davanagere while accepting the bribe amount of ₹ 3,000/- from the complainant. The bribe amount has been seized. The case is under investigation says official press release.

ಸಂಖ್ಯೆ655/755

## ಎಸಿಬಿ ದಾಳಿ

ಬೆಂಗಳೂರು, ಜುಲೈ 12 (ಕರ್ನಾಟಕ ವಾರ್ತೆ)

ಇಂದು ದಿನಾಂಕ: **12.07.2018** ರಂದು ಭ್ರಷ್ಟಾಚಾರ ನಿಗ್ರಹ ದಳವು ಶ್ರೀ. ಶಿವಾನಂದ ಹನುಮಪ್ಪ ರಡ್ಡೆರ, ಕಾರ್ಯ ನಿರ್ವಾಹಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಹಾಗೂ ನೈರ್ಮಲೀಕರಣ, ರೋಣ ಉಪವಿಭಾಗ ಎಂಬುವವರು ತಮ್ಮ ಆದಾಯಕ್ಕಿಂತ ಹೆಚ್ಚು ಅಸಮತೋಲನ ಆಸ್ತಿ-ಪಾಸ್ತಿಗಳನ್ನು ಹೊಂದಿರುವ ಬಗ್ಗೆ ವಿಶ್ವಾಸಾರ್ಹ ಮಾಹಿತಿ ಸಂಗ್ರಹಿಸಿ ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲಿಸಿ ಅವರಿಗೆ ಸಂಭಂದಿಸಿದ ಸಂಶಿದಿಬ್ಬ, ರೋಣದಲ್ಲಿರುವ ವಾಸದ ಮನೆ ಮತ್ತು ಇವರು ಕರ್ತವ್ಯ ನಿರ್ವಹಿಸುತ್ತಿರುವ ಕಚೇರಿಗಳ ಮೇಲೆ ದಾಳಿ ನಡೆಸಿರುತ್ತದೆ.

ಎಸಿಬಿ ಉತ್ತರ ವಲಯ, ಬೆಳಗಾವಿ ಅಧೀನ ಠಾಣೆಗಳ ತಂಡಗಳಿಂದ ಮೇಲ್ಕಂಡ ಆರೋಪಿತ ಸರ್ಕಾರಿ ನೌಕರನ ವಿರುದ್ಧ ದಾಳಿ ಮುಂದುವರೆದಿದ್ದು, ಸದರಿ ಸರ್ಕಾರಿ ನೌಕರನು ಹೊಂದಿರುವ ಆಸ್ತಿ ಪಾಸ್ತಿಗಳ ಮೂಲದ ಬಗ್ಗೆ ತನಿಖೆ ಮುಂದುವರೆದಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಸಂಖ್ಯೆ656/756

## ACB Raid

**Bengaluru, July 12 (Karnataka Information)**

Today ACB has conducted raids over the properties of **Sri. Shivanand Hanumappa Raddar, Asst Executive Engineer, Rural water Supply and sanitation, Ron Sub-Division**, who is believed to have amassed disproportionate assets beyond his known sources of Income. **His place of residence at Sanshidibba, Ron and Office of the AEE, Rural water supply and sanitation, Ron Sub-Division**, **Taluk Panchayat** premises at Ron are being searched currently by Gadag ACB team.

A case against the official mentioned above is registered under Prevention of Corruption act 1988 at Gadag ACB Police Station, Search and verification of properties by the ACB teams is continued to find out the source of income and other possible places for the search says a official press release.

ಸಂಖ್ಯೆ657/757

# ACB Raid

## Bengaluru, July 12 (Karnataka Information)

On 11.07.2018 ACB had conducted raids over the properties of Shri. H.Rammurthy, RFO, Jagalur, Davanagere district who is belived to have amassed disproportionate assets beyond his known sources of income. Raids were conducted at his Chitradurga residence near Kote area, Farm house in Bhaktanakatte village, Tarikere taluk, Chikmagaluru district and RFO office in Jagalur of Davanagere district. Details of the properties identified during the raids are as follows.

**9 Sites & 35 Acres Farm Land, Gold 1 KG, Silver 600 gms, 1 Scorpio Car,1 Bolero Jeep, 1 Two wheeler, Cash ₹ 1.58 Lakhs and ₹ 18.18 lakhs worth household items were found.**

Investigation is continued and efforts are being put to find out the Source of Income and other possible places for the Search says a official press release.

ಸಂಖ್ಯೆ658/758

# ಎಸಿಬಿ ದಾಳಿ

ಬೆಂಗಳೂರು, ಜುಲೈ 12 (ಕರ್ನಾಟಕ ವಾರ್ತೆ)

ದಿನಾಂಕ:11-07-2018 ರಂದು ಚಿತ್ರದುರ್ಗ ಭ್ರಷ್ಟಾಚಾರ ನಿಗ್ರಹ ದಳವು ಶ್ರೀ ಹೆಚ್.ರಾಮಮೂರ್ತಿ ವಲಯ ಅರಣ್ಯ ಅಧಿಕಾರಿ, ಜಗಳೂರು, ದಾವಣಗೆರೆ ಜಿಲ್ಲೆ ಎಂಬುವವರು ತಮ್ಮ ಬಲ್ಲ ಮೂಲಗಳಿಂದ ಅಸಮತೋಲನ ಆಸ್ತಿ-ಪಾಸ್ತಿಗಳನ್ನು ಹೊಂದಿರುವ ಬಗ್ಗೆ ವಿಶ್ವಾಸಾರ್ಹ ಮಾಹಿತಿ ಸಂಗ್ರಹಿಸಿ ಅಕ್ರಮ ಆಸ್ತಿ ಗಳಿಕೆ ಪ್ರಕರಣಗಳನ್ನು ದಾಖಲಿಸಿ ಅವರು ವಾಸಿಸುತ್ತಿರುವ ಕೋಟೆ ರಸ್ತೆ ಚಿತ್ರದುರ್ಗ ನಿವಾಸ ಮತ್ತು ತರೀಕೆರೆ ಭಕ್ತನ ಕಟ್ಟೆಯ ತೋಟದ ಮನೆ ಮತ್ತು ಇವರು ಕರ್ತವ್ಯ ನಿರ್ವಹಿಸುತ್ತಿರುವ ವಲಯ ಅರಣ್ಯ ಅಧಿಕಾರಿಗಳ ಕಛೇರಿ ಜಗಳೂರು ಮೇಲೆ ದಾಳಿ ನಡೆಸಲಾಗಿರುತ್ತದೆ. ಶೋಧನಾ ಕಾರ್ಯವು ಮುಂದುವರೆದಿದ್ದು ಈವರೆಗೆ ಶೋಧನೆ ನಡಸಲಾದ ಸ್ಥಳಗಳಲ್ಲಿ ತನಿಖೆಯಲ್ಲಿ ಪತ್ತೆಯಾದ ಆರೋಪಿತ ಸರ್ಕಾರಿ ನೌಕರನ ಚರ ಮತ್ತು ಸ್ಥಿರ ಆಸ್ತಿಗಳ ವಿವರ ಈ ಕೆಳಕಂಡಂತಿರುತ್ತವೆ.

**9 ನಿವೇಶನಗಳು, 35 ಎಕರೆ ಕೃಷಿ ಜಮೀನು, ಚಿನ್ನ 1 ಕೆಜಿ, ಬೆಳ್ಳಿ 600 ಗ್ರಾಂ, 1 ಸ್ಕಾರ್ಪಿಯೋ, 1 ಬೋಲೆರೋ, 1 ದ್ವಿಚಕ್ರ ವಾಹನ, ₹ 1.58 ಲಕ್ಷ ನಗದು ಮತ್ತು ₹ 18.18 ಲಕ್ಷ ಗೃಹೋಪಯೋಗಿ ವಸ್ತುಗಳು ಕಂಡು ಬಂದಿರುತ್ತದೆ**.

ತನಿಖೆ ಮುಂದುವರೆದಿದ್ದು, ಆರೋಪಿತ ಸರ್ಕಾರಿ ನೌಕರನು ಹೊಂದಿರುವ ಆಸ್ತಿ-ಪಾಸ್ತಿಗಳ ಮೂಲದ ಬಗ್ಗೆ ತನಿಖೆ ಹಾಗೂ ದಾಖಲೆಗಳ ಪರಿಶೀಲನಾ ಕಾರ್ಯ ಹಾಗೂ ಸಂಬಂಧಪಟ್ಟ ಇನ್ನು ಹೆಚ್ಚಿನ ಸ್ಥಳಗಳ ಮಾಹಿತಿ ಸಂಗ್ರಹಣೆ ಮುಂದುವರೆದಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.